# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 713
ಸದಸ್ಯರ ಹೆಸರು : ಶ್ರೀ ಬಿ.ಎಂ. ಫಾರೂಖ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ :11.12.2023
ಉತ್ತರಿಸುವವರು : ಮಾನ್ಯ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ (ಮಂಗಳೂರಿನ) ಉಳ್ಳಾಲ ತಾಲ್ಲೂಕಿನ ಮುಡಿಪು ಗ್ರಾಮದ ಪಕ್ಕದಲ್ಲಿರುವ ಇರಾ ಗ್ರಾಮ-ಸರ್ವೆ ನಂ.180, 185, 186 ಇತ್ಯಾದಿಗಳು ಸೇರಿದಂತೆ ಪರಿಸರದಲ್ಲಿ ಇರುವ ಅರಣ್ಯ ಪ್ರದೇಶವನ್ನು ಅಭಿವೃದ್ಧಿಪಡಿಸಬೇಕಾದ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಂಗಳೂರು ವೃತ್ತದ, ಮಂಗಳೂರು ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ (ಮಂಗಳೂರಿನ) ಉಳ್ಳಾಲ ತಾಲ್ಲೂಕಿನ ಮುಡಿಪು ಗ್ರಾಮದ ಪಕ್ಕದಲ್ಲಿರುವ ಇರಾ ಗ್ರಾಮದ ಸರ್ವೆ ನಂ. 180, 185, 186 ಇತ್ಯಾದಿಗಳು ಕೆಐಎಡಿಬಿಗೆ ವರ್ಗಾವಣೆಗೊಂಡ ಜಮೀನಾಗಿರುವುದಾಗಿ, ಸದರಿ ಜಮೀನಿಗೆ ಲಗ್ತು ಸ.ನಂ. 173 ಮತ್ತು 365/5ಪಿ1 ರಲ್ಲಿ 59.00 ಎಕರೆ ಮೀಸಲು ಅರಣ್ಯವಿದ್ದು, ಸದರಿ ಮೀಸಲು ಅರಣ್ಯ ಪ್ರದೇಶವನ್ನು ಅಭಿವೃದ್ಧಿಪಡಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈಗಾಗಲೇ ಸದರಿ ರಕ್ಷಿತ ಅರಣ್ಯದ ಸುತ್ತಲೂ ರಕ್ಷಣೆಗಾಗಿ ಸಿಮೆಂಟ್ ಪಿಲ್ಲರ್ ತಂತಿಬೇಲಿಯನ್ನು ಅಳವಡಿಸಲಾಗಿರುತ್ತದೆ. |
| ಆ) | ಈ ಅರಣ್ಯ ಪ್ರದೇಶವನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮತ್ತು ಅಭಿವೃದ್ಧಿ ಮಾಡದಿರುವುದರಿಂದ ಆ ಭಾಗದಲ್ಲಿ ಸಂಚರಿಸುವ ಕಾಡುಕೋಣ, ಕಾಡು ಹಂದಿ, ನವಿಲು ಮುಂತಾದ ವನ್ಯಜೀವಿಗಳು ಅಕ್ಕಪಕ್ಕದ ಜನವಸತಿ, ಕೃಷಿ ಭೂಮಿಯನ್ನು ಆಕ್ರಮಿಸುತ್ತಿರುವುದರಿಂದ ತೀವ್ರ ಹಾನಿಯಾಗುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ವನ್ಯಪ್ರಾಣಿಗಳ ಹಾವಳಿಯನ್ನು ತಪ್ಪಿಸಲು 2022-23 ನೇ ಸಾಲಿನಲ್ಲಿ ಇರಾ ಮೀಸಲು ಅರಣ್ಯ ಪ್ರದೇಶದಲ್ಲಿ 3.6 ಕಿ.ಮೀ ಆರ್.ಸಿ.ಸಿ ಬೇಲಿಯನ್ನು ನಿರ್ಮಿಸಲಾಗಿದೆ. |
| ಇ) | ಸಂತ್ರಸ್ಥ ಗ್ರಾಮಸ್ಥರು ಹಾಗೂ ಬೆಳೆ ಹಾನಿಯಿಂದ ನಷ್ಟ ಅನುಭವಿಸಿರುವ ರೈತರ ಅಹವಾಲು ಈಗಾಗಲೇ ಅರಣ್ಯ ಇಲಾಖೆಗೆ ಸಲ್ಲಿಸಲಾಗಿದ್ದು, ಬೆಳೆ ನಷ್ಟ ಪರಿಹಾರ ಒದಗಿಸಲು ಹಾಗೂ ಗ್ರಾಮಸ್ಥರ ಸುರಕ್ಷತಾ ಕ್ರಮಗಳ ಕುರಿತು ಸರ್ಕಾರವು ತಕ್ಷಣ ಸ್ಪಂದಿಸುವುದೇ; ಸಕಾಲದಲ್ಲಿ ಸೂಕ್ತ ಕ್ರಮ ಹಾಗೂ ಯೋಜನೆಗಳ ಬಗ್ಗೆ; (ಸಂಪೂರ್ಣ ವಿವರ ನೀಡುವುದು) | ಸದರಿ ಗ್ರಾಮದ ಗ್ರಾಮಸ್ಥರಿಂದ ಸಾರ್ವಜನಿಕವಾಗಿ ಅರ್ಜಿ ಸಲ್ಲಿಕೆಯಾಗಿದ್ದು, ಅದರಂತೆ ಸ್ಥಳ ಪರಿಶೀಲನೆ ನಡೆಸಿ ಎರಡು ಬಾರಿ ಕಾಡುಕೋಣಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕೆಲಸವನ್ನು ನಿರ್ವಹಿಸಲಾಗಿರುತ್ತದೆ. ಪರಿಹಾರ ಕೋರಿ ಯಾವುದೇ ವೈಯಕ್ತಿಕ ಅರ್ಜಿಗಳು ಈವರೆಗೆ ಕಛೇರಿಗೆ ಸ್ವೀಕೃತಿಯಾಗದೇ ಇರುವುದರಿಂದ ಯಾವುದೇ ಪರಿಹಾರವನ್ನು ಒದಗಿಸಲಾಗಿರುವುದಿಲ್ಲ.<br><br>ಮುಂದುವರೆದು, ದೂರು ಸಲ್ಲಿಸಿದಾಗ ಸಿಬ್ಬಂದಿಗಳು ಸಕಾಲದಲ್ಲಿ ಸ್ಪಂದಿಸಿ ಕಾಡುಕೋಣಗಳನ್ನು ಪಕ್ಕದ ಅರಣ್ಯ ಪ್ರದೇಶಕ್ಕೆ ಹಿಮ್ಮೆಟ್ಟಿಸುವ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಸದರಿ ಕಾಡುಕೋಣ ಹಾವಳಿ ಇರುವ ಪ್ರದೇಶದ ರೈತರು ಸೋಲಾರ್ ಬೇಲಿಯನ್ನು ಅಳವಡಿಸಿಕೊಳ್ಳಲು ಆಸಕ್ತರಿದ್ದಲ್ಲಿ ಶೇಕಡಾ 50 ರಷ್ಟು ಸಬ್ಸಿಡಿ ಸೌಲಭ್ಯದ ಬಗ್ಗೆ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. |

| | | |
|---|---|---|
| ಈ) | ಸದರಿ ಅರಣ್ಯ ಪ್ರದೇಶ ಈಗಾಗಲೇ ಭೂ ಸ್ವಾಧೀನ ಪಡಿಸಿಕೊಂಡು ಇನ್ನೂ ಕೈಗಾರಿಕೆಗಳಿಗೆ ಹಂಚಿಕೆ ಮಾಡದಿರುವ "ಕೆನರಾ ಕೈಗಾರಿಕಾ ಪ್ರದೇಶ"ಕ್ಕೆ ಹೊಂದಿಕೊಂಡಿದ್ದು, ಈ ಅರಣ್ಯ ಪ್ರದೇಶವನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವುದರಿಂದ ವನ್ಯಜೀವಿಗಳ ಹಾವಳಿಯನ್ನು ತಡೆಗಟ್ಟಬಹುದಾಗಿದ್ದು, ಈ ಕ್ರಮಗಳು ಯಾವಾಗ ಜಾರಿಯಾಗುವುದು, (ವಿವರ ನೀಡುವುದು) | ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ)ಗೆ ಹಂಚಿಕೆಯಾದ ಪ್ರದೇಶವನ್ನು ಸದರಿಯವರು ಅಭಿವೃದ್ಧಿಪಡಿಸಬೇಕಾಗಿದ್ದು, ಹೊಂದಿಕೊಂಡಿದ್ದ ಅರಣ್ಯ ಪ್ರದೇಶವನ್ನು ಈಗಾಗಲೇ ಅಭಿವೃದ್ಧಿಪಡಿಸಲು ತಂತಿಬೇಲಿ ಅಳವಡಿಸಲಾಗಿದೆ. |
| ಉ) | ಇರಾ ಗ್ರಾಮದ ಸುತ್ತಲಿನ ಹಾಗೂ ಕೆನರಾ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ಅರಣ್ಯ ಪದೇಶದ ವಿಸ್ತಾರವೆಷ್ಟು; ಪರಿಸರಕ್ಕೆ ಹೊಂದಿಕೊಂಡಂತಹ ವನ್ಯಮೃಗಗಳು ಯಾವುವು? (ಸಂಪೂರ್ಣ ಅಂಕಿ ಅಂಶಗಳೊಂದಿಗೆ ಮಾಹಿತಿ ನೀಡುವುದು) | ಬಂಟ್ವಾಳ ತಾಲ್ಲೂಕು ಇರಾ ಗ್ರಾಮದ ಸ.ನಂ.173 ಮತ್ತು 365/5ಪಿ1 ರಲ್ಲಿ ಒಟ್ಟು 59.00 ಎಕರೆ ಮೀಸಲು ಅರಣ್ಯ ಇದ್ದು, ಹಾಗೆಯೇ ಸ.ನಂ. 177 ರಲ್ಲಿ ಇಲಾಖಾ ವತಿಯಿಂದ ಬೆಳೆಸಿದ 2.5 ಹೆ. (6.2 ಎಕರೆ) ನೆಡುತೋಪು ಸಹ ತಾಗಿಕೊಂಡಿದ್ದು, ಸದರಿ ಸ್ಥಳದಲ್ಲಿ ಕಾಡುಹಂದಿ, ನವಿಲು ಮತ್ತು ಕಾಡುಕೋಣ ಜಾತಿಯ ಪ್ರಾಣಿ ಪಕ್ಷಿಗಳು ಇರುತ್ತವೆ. |

ಸಂಖ್ಯೆ: ಅಪಜೀ 137 ಎಫ್‌ಡಬ್ಲ್ಯೂಎಲ್ 2023

(ಈಶ್ವರ ಬಿ. ಖಂಡ್ರೆ)
ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು